ಎಲ್ಲರೂ ಕೇಳಬಹುದು, ಎಲ್ಲರಿಗೂ ಆ ಶಕ್ತಿಯಿದೆ.

ಶ್ರೀ ಬಿ.ಹೆಚ್.ಬನ್ನಿಕೋಡ್: ಮಾನ್ಯ ಅಧ್ಯಕ್ಷರೇ, ಒಂದೇ ಒಂದು ಕ್ಲಾರಿಫಿಕೇಷನ್ ಕೇಳುವುದೇನೆಂದರೆ, ಬಾಕಿ ಇರತಕ್ಕಂಥ 142 ಕೋಟಿ ರೂಪಾಯಿಗಳಲ್ಲಿ ನ್ಯಾಯಾಲಯದಲ್ಲಿ ಇರತಕ್ಕಂಥ ಪ್ರಕರಣಗಳ ಮೊತ್ತವೆಷ್ಟು, ನ್ಯಾಯಾಲಯದಲ್ಲಿ ಇಲ್ಲದೇ ಇರುವಂಥವುಗಳ ಮೊತ್ತ ಎಷ್ಟು ಎನ್ನುವುದನ್ನು ಸ್ಪಷ್ಟವಾಗಿದೆ ಕೊಟ್ಟಿಲ್ಲ. ನ್ಯಾಯಾಲಯದಲ್ಲಿದ್ದರೆ ತೀವ್ರ ಕ್ರಮ ತೆಗೆದುಕೊಂಡು ಇತ್ಯರ್ಥ ಮಾಡಿ ಸರ್ಕಾರ ವಸೂಲು ಮಾಡಬೇಕು. ನ್ಯಾಯಾಲಯದಲ್ಲಿ ಇಲ್ಲದಂಥ ಪ್ರಕರಣಗಳಲ್ಲಿ ತೀವ್ರವಾಗಿ ಹಣ ವಸೂಲು ಮಾಡಲು ಸರ್ಕಾರಕ್ಕೆ ಇರತಕ್ಕಂಥ ತೊಂದರೆ ಏನು? ಬೇಗ ವಸೂಲು ಮಾಡಿ, ಬಜೆಟ್‌ಗೆ ಅನುಕೂಲವಾಗಲಿ ಎಂದು ತಮ್ಮ ಮೂಲಕ ಕೇಳುತ್ತಿದ್ದೇನೆ.

ಅಧ್ಯಕ್ಷರು: ವಸೂಲು ಮಾಡುತ್ತೇವೆ ಎಂದು ಹೇಳಿದ್ದಾರೆ. ಇನ್ನು ಮುಂದಿನ ಪ್ರಶ್ನೆ ಸುಬ್ರಹ್ಮಣ್ಯರವರೇ ನಿಮ್ಮ ಪ್ರಶ್ನೆಗೆ ಒಂದು ವಾರ ಸಮಯ ಕೇಳಿದ್ದಾರೆ. ಆ ಬಗ್ಗೆ ನಮಗೆ ಪತ್ರ ಬಂದಿದೆ. ಮುಂದಿನ ವಾರ ಉತ್ತರ ಕೊಡುತ್ತಾರೆ.

ಸಂತೆಮರಹಳ್ಳಿ ಕ್ಷೇತ್ರದ ವ್ಯಾಪ್ತಿಯಲ್ಲಿ ವಿದ್ಯುತ್ ಅಪಘಾತದಿಂದ ಮರಣ ಹೊಂದಿದವರಿಗೆ ಪರಿಹಾರ.

30 (439)

ಶ್ರೀ ಕೃಷ್ಣಮೂರ್ತಿ, ಎ.ಆರ್(ಸಂತೇಮರಹಳ್ಳಿ): ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಂತೇಮರಹಳ್ಳಿ ಕ್ಷೇತ್ರದ ವ್ಯಾಪ್ತಿಯ ನಂಜನಗೂಡು ತಾಲ್ಲೂಕು ಕಾಲಂದೆ ಹೋಬಳಿ ವಿ.ಮರಹಳ್ಳಿ ಗ್ರಾಮದಲ್ಲಿ 30.5.1999ರಂದು ವಿದ್ಯುತ್ ಅಪಘಾತದಿಂದ ಮೃತಪಟ್ಟವರ ಸಂಖ್ಯೆ ಎಷ್ಟು? ಇತರೆ ಪ್ರಾಣಹಾನಿ ಸಂಬಂಧಿಸಿದೆಯೇ, ಇದರ ಅಂದಾಜು ನಷ್ಟ ಎಷ್ಟು; ಈ ಬಗ್ಗೆ ಏನಾದರೂ ಮೊಕದ್ದಮೆ ದಾಖಲಾಗಿದೆಯೇ; ಹಾಗೂ ಮೃತರ ಕುಟುಂಬಕ್ಕೆ ಪರಿಹಾರ ನೀಡಲಾಗಿದೆಯೇ; ಇಲ್ಲದಿದ್ದಲ್ಲಿ ಯಾವಾಗ ಪರಿಹಾರ ನೀಡಲಾಗುವುದು; ಈ ಬಗ್ಗೆ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ವಿವರ ನೀಡುವುದು.

ಆ) ಸಂತೇಮರಹಳ್ಳಿ ಕ್ಷೇತ್ರದ ವ್ಯಾಪ್ತಿಯ ದೇವನೂರು, ಸಂತೇಮರಹಳ್ಳಿ, ಚಂದಕವಾಡಿ ವಿದ್ಯುತ್ ಉಪಕೇಂದ್ರಗಳ ವಿತರಣಾ ಸಾಮರ್ಥ್ಯ ಎಷ್ಟು? ಹೆಚ್ಚುವರಿ

ವಿದ್ಯುತ್ ವಿತರಣಾ ವ್ಯವಸ್ಥೆಯ ಬಗ್ಗೆ ಹೆಚ್ಚುವರಿ ಲೋಡ್ ಷೆಡ್ ಅಳವಡಿಸಲು ಕ್ರಮ ಕೈಗೊಳ್ಳಬೇಕಾಗಿದೆ; ಹಾಗಿದ್ದಲ್ಲಿ ಯಾವಾಗ ಹೆಚ್ಚುವರಿ ಲೋಡ್‌ಶೆಡ್ ಅಳವಡಿಸುವ ಕಾರ್ಯ ಪೂರ್ಣಗೊಳ್ಳುವುದು?

ಶ್ರೀ ವೀರಕುಮಾರ್ ಪಾಟೀಲ್ (ಇಂಧನ ಸಚಿವರು):

ಅ) ಸಂತೇಮರಹಳ್ಳಿ ಕ್ಷೇತ್ರದ ವ್ಯಾಪ್ತಿಯ ನಂಜನಗೂಡು ತಾಲ್ಲೂಕು ಕವಲಂದೆ ಹೋಬಳಿ ಪಿ.ಮರಹಳ್ಳಿ ಗ್ರಾಮದಲ್ಲಿ 30.5.99 ರಂದು ಯಾವುದೇ ವಿದ್ಯುತ್ ಅಪಘಾತ ಸಂಭವಿಸಿರುವುದಿಲ್ಲ. ಆದರೆ ಸದರಿ ಗ್ರಾಮದಲ್ಲಿ ದಿನಾಂಕ 28.5.99ರಂದು ಒಂದು ವಿದ್ಯುತ್ ಅಪಘಾತ ಸಂಭವಿಸಿದ್ದು, ಅದರ ವಿವರಗಳು ಕೆಳಕಂಡಂತಿದೆ.

1. ಮೃತ ಪಟ್ಟವರ ಸಂಖ್ಯೆ: ಒಬ್ಬ ವ್ಯಕ್ತಿ

2. ಸತ್ತ ಪ್ರಾಣಿಗಳು: 4 ಎಮ್ಮೆಗಳು ಮತ್ತು 1 ಕುರಿ

3. ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಗಳನುಸಾರ ನೀಡಬೇಕಾಗಬಹುದಾದ ಪರಿಹಾರ ಧನದ ಒಟ್ಟು ಅಂದಾಜು ಮೊತ್ತರೂ. 59,500.00

4. ಕೌಲಂದೆ ಪೋಲೀಸ್ ಠಾಣೆಯಲ್ಲಿ ದಿನಾಂಕ 28.5.99ರಂದು ಪ್ರಥಮ ಮಾಹಿತಿ ವರದಿಯನ್ನು (ಎಫ್.ಐ.ಆರ್) ದಾಖಲು ಮಾಡಲಾಗಿದೆ. ಹಾಗೂ ಮಹಜರ್ ಸಹ ಜರುಗಿಸಲಾಗಿದೆ.

5. ಮೃತರ ಕುಟುಂಬಕ್ಕೆ ಪರಿಹಾರವನ್ನು ಇದುವರೆವಿಗೆ ನೀಡಿರುವುದಿಲ್ಲ. ಮೃತರ ಕುಟುಂಬಕ್ಕೆ ಪರಿಹಾರ ಧನವನ್ನು ನೀಡುವ ವಿಷಯದಲ್ಲಿ ಅಗತ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಗುತ್ತಿದೆ. ಹಾಗೂ ಕರ್ನಾಟಕ ಸರ್ಕಾರದ ಮುಖ್ಯ ವಿದ್ಯುತ್ ಪರಿವೀಕ್ಷಕರು ವರದಿಯನ್ನು ನಿರೀಕ್ಷಿಸಲಾಗುತ್ತದೆ. ಮುಖ್ಯ ವಿದ್ಯುತ್ ಪರಿವೀಕ್ಷಕರು ತಮ್ಮ ವರದಿಯಲ್ಲಿ ನೀಡುವ ತೀರ್ಮಾನದ ಪ್ರಕಾರ ಮುಂದಿನ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಆ) ಸಂತೇಮರಹಳ್ಳಿ ಕ್ಷೇತ್ರದ ವ್ಯಾಪ್ತಿಯ ದೇವನೂರು, ಸಂತೇಮರಹಳ್ಳಿ ಮತ್ತು ಚಂದಕವಾಡಿಗಳಲ್ಲಿರುವ ವಿದ್ಯುತ್ ಉಪಕೇಂದ್ರಗಳ ಸಾಮರ್ಥ್ಯದ ವಿವರಗಳು ಕೆಳ ಕಂಡಂತಿದೆ.

1.	66:11 ಕೆ.ವಿ. ಉಪ ಕೇಂದ್ರ	ದೇವನೂರು 6.3 ಎಂ.ವಿ.ಎ. ಸಾಮರ್ಥ್ಯದ ಒಂದು ಪವರ್ ಟ್ರಾನ್ಸ್ ಫಾರ್ಮರ್.

2.	66:11 ಕೆ.ವಿ ಉಪ ಕೇಂದ್ರ	ಸಂತೇಮರಹಳ್ಳಿ ವಿದ್ಯುತ್ ತಲಾ 6.3 ಎಂ.ವಿ.ಎ. ಸಾಮರ್ಥ್ಯದ ಎರಡು ಪವರ್ ಟ್ರಾನ್ಸ್‌ಫಾರ್ಮರ್‌ಗಳು.
3.	33.11 ಕೆ.ವಿ ಉಪ ಕೇಂದ್ರ	ಚಂದಕವಾಡಿ ವಿದ್ಯುತ್ 5 ಎಂ.ವಿ.ಎ.ಸಾಮರ್ಥ್ಯದ ಒಂದು ಪವರ್ ಟ್ರಾನ್ಸ್‌ಫಾರ್ಮರ್.

ದೇವನೂರಿಗೆ 66:11 ಕೆ.ವಿ.ವಿದ್ಯುತ್ ಉಪಕೇಂದ್ರದಲ್ಲಿ 6.3 ಎಂ.ವಿ.ಎ ಸಾಮರ್ಥ್ಯದ ಇನ್ನೊಂದು ಪವರ್ ಟ್ರಾನ್ಸ್‌ಫಾರ್ಮರನ್ನು ಅಳವಡಿಸಲು ಉದ್ದೇಶಿಸಿದೆ. ಈ ಕಾರ್ಯದ ವಿವರವಾದ ಯೋಜನಾ ವರದಿಯನ್ನು ಸಿದ್ದಪಡಿಸಲಾಗುತ್ತಿದ್ದು, ಮುಂಬರುವ ಆರ್ಥಿಕ ವರ್ಷವಾದ 2000-2001ರಲ್ಲಿ ಕೈಗೊಳ್ಳಲು ಉದ್ದೇಶಿಸಿದೆ.

ಸಂತೇಮರಹಳ್ಳಿಯ 66:11 ಕೆ.ವಿ.ವಿದ್ಯುತ್ ಉಪಕೇಂದ್ರದ ಸಾಮರ್ಥ್ಯವನ್ನು ಹೆಚ್ಚಳಗೊಳಿಸುವ ಪ್ರಸ್ತಾವನೆ ಪ್ರಸ್ತುತ ಇರುವುದಿಲ್ಲ.

ಚಂದಕವಾಡಿಯ 33: 11 ಕೆ.ವಿ.ವಿದ್ಯುತ್ ಉಪಕೇಂದ್ರದಲ್ಲಿ ಇನ್ನೊಂದು 5 ಎಂ.ವಿ.ಎ.ಸಾಮರ್ಥ್ಯದ ಪವರ್ ಟ್ರಾನ್ಸ್‌ಫಾರ್ಮರನ್ನು ಅಳವಡಿಸಲಾಗುತ್ತಿದ್ದು, ಈ ಕಾರ್ಯವು ಪ್ರಗತಿಯಲ್ಲಿದೆ. ಜೂನ್-2000ರ ಅಂತ್ಯದ ವೇಳೆಗೆ ಈ ಅಳವಡಿಕೆಯ ಕಾರ್ಯವನ್ನು ಪೂರ್ಣಗೊಳಿಸುವ ಗುರಿಯನ್ನು ಹೊಂದಲಾಗಿದೆ.

ಶ್ರೀ ಎ.ಆರ್.ಕೃಷ್ಣಮೂರ್ತಿ: ಮಾನ್ಯ ಅಧ್ಯಕ್ಷರೇ, ಸಂತೇಮರಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವಿದ್ಯುತ್ ಅಪಘಾತದಿಂದ ಮೃತಪಟ್ಟವರ ಸಂಖ್ಯೆ ಎಷ್ಟು? ಇತರೆ ಪ್ರಾಣಹಾನಿ ಸಂಭವಿಸಿದೆಯೇ, ಇದರ ಅಂದಾಜು ನಷ್ಟ ಎಷ್ಟು, ಈ ಬಗ್ಗೆ ಏನಾದರೂ ಘೋಕದ್ದಮೆ ದಾಖಲಾಗಿದೆಯೇ ಹಾಗೂ ಮೃತರ ಕುಟುಂಬಕ್ಕೆ ಪರಿಹಾರ ನೀಡಲಾಗಿದೆಯೇ? ಎನ್ನುವ ಪ್ರಶ್ನೆಯನ್ನು ನಾನು ಕೇಳಿದ್ದೆ. ಅದಕ್ಕೆ ಮಾನ್ಯ ಸಚಿವರು 'ದಿನಾಂಕ 28-5-99ರಂದು ಒಂದು ವಿದ್ಯುತ್ ಅಪಘಾತ ಸಂಭವಿಸಿದ್ದು ಅದರ ವಿವರಗಳು ಹೀಗಿವೆ- ಮೃತ ಪಟ್ಟವರು; ಒಬ್ಬ ವ್ಯಕ್ತಿ, ಸತ್ತ ಪ್ರಾಣಿಗಳು: 4 ಎಮ್ಮೆಗಳು ಮತ್ತು 1 ಕುರಿ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ನಿಯಮಗಳನುಸಾರ ನೀಡಬೇಕಾಗಬಹುದಾದ ಪರಿಹಾರಧನದ ಮೊತ್ತ ಸುಮಾರು 59,500 ರೂಪಾಯಿಗಳೆಂದು ಅಂದಾಜು ಮಾಡಲಾಗಿದೆ. ಈ ವಿಚಾರದಲಿ ಮೊಕದ್ದಮೆ ಕೂಡ ದಾಖಲಾಗಿದ್ದು ಮಹಜರ್ ಸಹ ಜರುಗಿಸಲಾಗಿದೆ ಎಂದು ಹೇಳಿದ್ದಾರೆ. ಪರಿಹಾರದ ವಿಚಾರದಲ್ಲಿ, ಮೃತರ ಕುಟುಂಬಕ್ಕೆ ಪರಿಹಾರವನ್ನು ಇದುವರೆವಿಗೆ ನೀಡಿರುವುದಿಲ್ಲ. ಈ ವಿಷಯದಲ್ಲಿ ಅಗತ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಗುತ್ತಿದೆ. ಕರ್ನಾಟಕ

ಸರ್ಕಾರದ ಮುಖ್ಯ ವಿದ್ಯುತ್ ಪರಿವೀಕ್ಷಕರು ನೀಡುವ ವರದಿಯನ್ನು ನಿರೀಕ್ಷಿಸಲಾಗುತ್ತಿದೆ. ಅವರು ತಮ್ಮ ವರದಿಯಲ್ಲಿ ನೀಡುವ ತೀರ್ಮಾನದ ಪ್ರಕಾರ ಮುಂದಿನ ಕ್ರಮವನ್ನು ತೆಗೆದುಕೊಳ್ಳಲಾಗುವುದು' ಎನ್ನುವ ಉತ್ತರ ಕೊಟ್ಟಿದ್ದಾರೆ. ನಾನು ಇದೇ ಪ್ರಶ್ನೆಯನ್ನು ಕಳೆದ ಸದನದಲ್ಲಿ ಹಾಕಿದಂಥ ಸಂದರ್ಭದಲ್ಲಿ ಅಂದಿನ ಇಂಧನ ಸಚಿವರಾದಂಥ ಸನ್ಮಾನ್ಯ ದರ್ಶನಾಪುರ್‌ರವರು ಕೊಟ್ಟಿರುವ ಉತ್ತರವನ್ನು ತಮ್ಮ ಅಪ್ಪಣೆ ಪಡೆದು ಇಲ್ಲಿ ಓದಲು ಬಯಸುತ್ತೇನೆ. 'ದರ್ಶನಾಪುರ್: ಅಧ್ಯಕ್ಷರೇ, ಈ ವರ್ಷ 20 ದಿವಸಗಳ ಹಿಂದೆ ಒಂದು ಘಟನೆ ಮತ್ತು ಒಂದು ವಾರದ ಹಿಂದೆ ಆದ ಘಟನೆ ಬಗ್ಗೆ ನಮಗೆ ಇನ್ನೂ ಸಿ.ಎ.ಜಿ ವರದಿ ಬಂದಿಲ್ಲ. ಅದು ಬಂದ ತಕ್ಷಣ ನಮ್ಮ ಇಲಾಖೆ ವತಿಯಿಂದ ತಪ್ಪಿತಸ್ಥರ ಮೇಲೆ ನಾವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಮತ್ತು ಪರಿಹಾರವನ್ನು ಆದಷ್ಟು ಬೇಗ ಅದರ ವಾರಸುದಾರರು ಸರ್ಟಿಫಿಕೇಟ್ ಮತ್ತು ಇತರ ಕಾಗದ ಪತ್ರಗಳನ್ನು ಕೊಟ್ಟ ತಕ್ಷಣ ಕೊಡಲು ಅಲ್ಲಿನ ಎಸ್.ಸಿ.ಇ. ಯವರಿಗೆ ನಾವು ಪವರ್ಸ್ ಡೆಲಿಗೇಟ್ ಮಾಡಿದ್ದೇವೆ. ಕಾಗದಪತ್ರಗಳು ಬಂದತಕ್ಷಣ ಪರಿಹಾರ ಕೊಡಿಸಲು ವ್ಯವಸ್ಥೆ ಮಾಡಲಾಗುತ್ತದೆ' ಎಂದು 6-7-99ರಂದು ನನ್ನ ಪ್ರಶ್ನೆ ಸಂಖ್ಯೆ 2117ಕ್ಕೆ ಉತ್ತರ ಕೊಟ್ಟಿದ್ದರು. ಇವತ್ತೂ ಕೂಡ ನಾನು ಅದೇ ಪ್ರಶ್ನೆಯನ್ನು ಹಾಕಿದ್ದೇನೆ. 12-6-99ರಂದು ಬಸವೇಗೌಡ ಎನ್ನುವವರು ಕೂಡ ವಿದ್ಯುತ್ತಿನ ಅಪಘಾತಕ್ಕೆ ಒಳಗಾಗಿದ್ದರು ಇವೆರಡೂ ಕೂಡ ವಿದ್ಯುತ್ ಅಪಘಾತಗಳಿಂದ ಆದಂಥ ಮರಣ.

ಅಧ್ಯಕ್ಷರು: ತಾವು ಪ್ರಶ್ನೆ ಕೇಳಿ ಉತ್ತರ ತೆಗೆದುಕೊಳ್ಳಿ, ಹಳೆಯ ಪ್ರಶ್ನೆ ಆ ರೀತಿ ಕೇಳಿದ್ದೆ ಎನ್ನುವುದು ಈಗ ಬೇಡ. ಈಗ ನಿಮಗೆ ಏನು ಬೇಕು, ಅದಕ್ಕೆ ಪ್ರಶ್ನೆ ಕೇಳಿ ಉತ್ತರ ತೆಗೆದುಕೊಳ್ಳಿ.

ಶ್ರೀ ಎ.ಆರ್.ಕೃಷ್ಣಮೂರ್ತಿ: ನನ್ನ ಪ್ರಶ್ನೆಗೆ ವರದಿ ನಿರೀಕ್ಷಿಸಲಾಗುತ್ತಿದೆ ಎನ್ನುವ ಉತ್ತರವನ್ನು ಈಗಲೂ ಹೇಳುತ್ತಿದ್ದಾರೆ. ಅಂದು ಪ್ರಶ್ನೆ ಕೇಳಿದಾಗ, ತತ್‌ಕ್ಷಣ ಪರಿಹಾರವನ್ನು ಒದಗಿಸಿಕೊಡುತ್ತೇವೆ ಎಂದು ಅವತ್ತಿನ ಮಂತ್ರಿಗಳು ಹೇಳಿದ್ದರು. ಆದರೆ ಈ ವಿಚಾರದಲ್ಲಿ ಅಧಿಕಾರಿಗಳು ಇನ್ನೂ ಮಾಹಿತಿಯನ್ನು ಒದಗಿಸಿ ಕೊಟ್ಟಿಲ್ಲ ಸಂಬಂಧಪಟ್ಟವರಿಗೆ ಪರಿಹಾರ ತಲುಪಿಸುವಂಥ ವ್ಯವಸ್ಥೆಯನ್ನು ಏಕೆ ಮಾಡಿಲ್ಲ ಎಂದು ನಾನು ಪ್ರಶ್ನೆ ಕೇಳಬಯಸುತ್ತೇನೆ.

ಶ್ರೀ ವೀರಕುಮಾರ್ ಪಾಟೀಲ್ (ಇಂಧನ ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೇ, ವರದಿ ಬಂದಿದೆ. ಆ ವರದಿ ಪ್ರಕಾರ ಕೆ.ಪಿ.ಟಿ.ಸಿ.ಎಲ್. ಕಡೆಯಿಂದ ನಾವು ಪರಿಹಾರವನ್ನು ನೀಡುತ್ತೇವೆ. ವರದಿ ಬರುವುದು ಸ್ವಲ್ಪ ತಡವಾಗಿದೆ ಎನ್ನುವುದನ್ನು ನಾವು ಒಪ್ಪುತ್ತೇವೆ. ಯಾರು ತಡ ಮಾಡಿದ್ದಾರೆ ಅವರ ಮೇಲೆ ಕ್ರಮವನ್ನೂ ತೆಗೆದುಕೊಳ್ಳುತ್ತೇವೆ.

ಶ್ರೀ ಎ.ಆರ್.ಕೃಷ್ಣಮೂರ್ತಿ: ಈ ಪ್ರಶ್ನೆಗೆ 6-7-99ರಂದು ಕೊಟ್ಟ ಉತ್ತರವೂ, ಇವತ್ತಿನ ಉತ್ತರವೂ ಒಂದೇ ಆಗಿದ್ದು, ಪರಿಹಾರ ಕೊಡುವಲ್ಲಿ ವಿಳಂಬವಾಗಿದೆ, ಅದನ್ನು ತುರ್ತಾಗಿ ನೀಡಬೇಕು. ವರದಿ ನೀಡಲು ನಿಧಾನ ಮಾಡಿದವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಆ ವಿಚಾರದಲ್ಲಿ ಕೂಡ ಕ್ರಮ ತೆಗೆದುಕೊಳ್ಳಬೇಕು. ಅತಿ ಜರೂರಾಗಿ ಸಂಬಂಧಪಟ್ಟ ಮೃತ ಕುಟುಂಬದವರಿಗೆ ಪರಿಹಾರ ದೊರಕುವ ರೀತಿಯಲ್ಲಿ ಅದನ್ನು ಕಾರ್ಯರೂಪಕ್ಕೆ ತರಬೇಕು ಎಂದು ಹೇಳುತ್ತೇನೆ. ಇದರಲ್ಲಿ ಎರಡನೇ ಪ್ರಶ್ನೆ ಇದೆ. ಸಂತೇಮರಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಮೂರು ವಿದ್ಯುತ್ ಉಪಕೇಂದ್ರಗಳು ಬರುತ್ತವೆ. ಒಂದು ಸಂತೇಮರಹಳ್ಳಿಯಲ್ಲಿ, ಮತ್ತೊಂದು ಚಾಮರಾಜನಗರ ತಾಲ್ಲೂಕಿನ ಚಂದಕವಾಡಿಯಲ್ಲಿ, ಮತ್ತೊಂದು ನಂಜನಗೂಡು ತಾಲ್ಲೂಕಿನ ದೇವನೂರಿನಲ್ಲಿ ಈ ಉಪ ಕೇಂದ್ರಗಳಿವೆ. ಇವುಗಳ ಸಾಮರ್ಥ್ಯವನ್ನು ಹೆಚ್ಚಳ ಮಾಡುವ ವಿಚಾರದಲ್ಲಿ ಏನು ಕ್ರಮ ತೆಗೆದುಕೊಳ್ಳಲಾಗಿದೆ ಎಂದು ನಾನು ಪ್ರಶ್ನೆಯನ್ನು ಕೇಳಿದ್ದೆ. ಈಗಿರತಕ್ಕಂಥ ಸಾಮರ್ಥ್ಯವನ್ನು ಉತ್ತರದಲ್ಲಿ ತಿಳಿಸಿದ್ದಾರೆ. ಸಾಮರ್ಥ್ಯವನ್ನು ಹೆಚ್ಚು ಮಾಡುವ ವಿಚಾರದಲ್ಲಿ, 'ಇನ್ನೊಂದು ಪವರ್ ಟ್ರಾನ್ಸ್‌ಫಾರ್ಮರನ್ನು ಅಳವಡಿಸಲು ಉದ್ದೇಶಿಸಿದ್ದು, ಈ ಕಾರ್ಯದ ವಿವರವಾದ ಯೋಜನಾ ವರದಿಯನ್ನು ಸಿದ್ಧಪಡಿಸಲಾಗುತ್ತಿದ್ದು, ಮುಂಬರುವ ಆರ್ಥಿಕ ವರ್ಷದಲ್ಲಿ ಕೈಗೊಳ್ಳಲು ಉದ್ದೇಶಿಸಿದೆ' ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ನಮ್ಮ ಕ್ಷೇತ್ರದಲ್ಲಿ, ದೇವನೂರು ಶತಮಾನೋತ್ಸವದ ಮುಕ್ತಾಯ ಸಮಾರಂಭಕ್ಕೆ ಬರಲು ಒಪ್ಪಿಕೊಂಡಿದ್ದರು. ಆ ಒಂದು ಜಯಂತೋತ್ಸವ ಕಾರ್ಯಕ್ರಮ ಪ್ರಾರಂಭವಾಗುವುದಕ್ಕೆ ಮುಂಚೆಯೇ ಇದನ್ನು ಮಾಡಿಕೊಡಬೇಕು ಎಂದು ನಾನು ಆವತ್ತು ಕೇಳಿದಾಗ, ಮಾನ್ಯ ಮುಖ್ಯಮಂತ್ರಿಗಳು ಅದಕ್ಕೆ ಮಂಜೂರಾತಿ ಕೊಡಿಸಿ, ಅದನ್ನು ಅತಿ ಜರೂರಾಗಿ ಮಾಡಿಸಿಕೊಡುತ್ತೇನೆ ಎಂದು ಹೇಳಿದ್ದರು. ಆದರೆ ಈ ಉತ್ತರದಲ್ಲಿ ಇದರ ಮಂಜೂರಾತಿಯನ್ನು ಮುಂದಿನ ಸಾಲಿನಲ್ಲಿ ಮಾಡಿಕೊಡುತ್ತೇವೆ ಎಂದು ಕೊಟ್ಟಿದ್ದಾರೆ. ಇದು ಈಗಾಗಲೇ ಮಂಜೂರು ಆಗಿರತಕ್ಕಂಥ ಕೆಲಸ. ಇದು ಜರೂರು ಆಗಿ ಆಗಬೇಕು. ಸಂತೇಮರಹಳ್ಳಿ ಸಬ್‌ಸ್ಟೇಷನ್ ಜಾಗದಲ್ಲಿ ಒಂದು ಹೆಚ್ಚುವರಿ ಸಾಮರ್ಥ್ಯದ ಟ್ರಾನ್ಸ್‌ಫಾರ್ಮರನ್ನು ಅಳವಡಿಸಿದ್ದಾರೆ. ಆದರೆ ಅಲ್ಲಿ ಫೀಡರ್ ಲೈನ್ ಆಗಿಲ್ಲ.

ಅಧ್ಯಕ್ಷರು: ಇಲ್ಲಿ ವಿವರಗಳು ಬೇಕಾಗಿಲ್ಲ. ನಿಮಗೆ ಏನು ಬೇಕು ಅದನ್ನು ನೇರವಾಗಿ ಕೇಳಿ. ಇಂಥದ್ದು ಆಗಬೇಕು ಅದನ್ನು ಮಾಡಿಕೊಡಿ ಎಂದು ಕೇಳಿದರೆ ಸಾಕು.

ಶ್ರೀ ಎ.ಆರ್.ಕೃಷ್ಣಮೂರ್ತಿ: ಮಾನ್ಯ ಅಧ್ಯಕ್ಷರೆ, ಇದು ಕಳೆದ ಎರಡು ವರ್ಷಗಳಿಂದ

ಪೆಂಡಿಂಗ್‌ನಲ್ಲಿದೆ. ಇದನ್ನು ಮಾಡಿಕೊಟ್ಟರೆ ಆ ಭಾಗದ ರೈತರಿಗೆ, ಯುವಕರಿಗೆ ಅನುಕೂಲವಾಗುತ್ತದೆ.

ಶ್ರೀ ವೀರಕುಮಾರ್ ಪಾಟೀಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ವಿಚಾರದ ಬಗ್ಗೆ ಪರಿಶೀಲಿಸಿ ಬೇಗ ಮಾಡಿಕೊಡುತ್ತೇವೆ.

ಅಧ್ಯಕ್ಷರು: ಪ್ರಶ್ನೋತ್ತರ ವೇಳೆ ಮುಗಿಯಿತು.

(ಅ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ 2ನೇ ಪಟ್ಟಿಯಲ್ಲಿರುವ 134 ಪ್ರಶ್ನೆಗಳ ಪೈಕಿ 95 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಸೋಮವಾರಪೇಟೆ ತಾಲ್ಲೂಕು ಮಾದಾಪುರದಲ್ಲಿ ನೂತನ ಪೋಲೀಸ್ ಠಾಣೆ ತೆರೆಯುವುದು.

131 (312)

ಶ್ರೀ ಎಂ.ಪಿ.ಅಪ್ಪಚ್ಚುರಂಜನ್ (ಸೋಮವಾರಪೇಟೆ): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನೂತನವಾಗಿ ತೆರೆಯಲು ಉದ್ದೇಶಿಸಿರುವ ಪೊಲೀಸ್ ಠಾಣೆಗಳ ಸಂಖ್ಯೆ ಎಷ್ಟು; ಎಲ್ಲೆಲ್ಲಿ ತೆರೆಯಲು ಉದ್ದೇಶಿಸಲಾಗಿದೆ?

ಆ) ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕು ಮಾದಾಪುರದಲ್ಲಿ ನೂತನ ಪೊಲೀಸ್ ಠಾಣೆ ತೆರೆಯುವ ಉದ್ದೇಶ ಸರ್ಕಾರಕ್ಕೆ ಇದೆಯೆ?

ಇ) ಹಾಗಿದ್ದಲ್ಲಿ, ಈ ಠಾಣೆಯನ್ನು ಎಂದಿನಿಂದ ತೆರೆಯಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು):

ಅ) ಹಣಕಾಸಿನ ಲಭ್ಯತೆಗೆ ಒಳಪಟ್ಟು ೨೦೦೦-೨೦೦೧ನೇ ಸಾಲಿನಲ್ಲಿ